# ಎರಡನೇ ಮಗುವಿನ ಯಶೋಗಾಥೆ



2009ರ 'ಮಿಸ್ ಇಂಡಿಯಾ' ಕಿರೀಟ ಪೂಜಾ ಚೋಪ್ರಾರ ಮುಡಿಗೇರಿದಾಗ ಸ್ಟೇಜ್‌ನ ಮುಂದೆ ಕೂತಿದ್ದ ಆಕೆಯ ತಾಯಿಯ ಕಣ್ಣಲ್ಲಿ ಆನಂದದ ಕಣ್ಣೀರು ಹರಿಯುತ್ತಿದ್ದವು. 'ತಾನು ಬೇಕೋ, ಇಲ್ಲಾ ಈ ಅನಿಷ್ಟದ ಹೆಣ್ಣು ಮಗು ಬೇಕೋ?' ಎಂದು ಗಂಡ ಕೇಳಿದಾಗ, ಕಂಕುಳಲ್ಲಿದ್ದ ಹೆಣ್ಣು ಕೂಸನ್ನು ಆಯ್ಕೆ ಮಾಡಿಕೊಂಡಿದ್ದ ಅವರಿಗೆ, ಅದೇ ಹೆಣ್ಣುಮಗು ಇಡೀ ದೇಶದ ಗಮನ ಸೆಳೆದಾಗ ಹೆಮ್ಮೆಯಾಗದೆ ಇದ್ದೀತೇ?

ಮೊದಲನೆಯ ಹೆಣ್ಣು ಮಗುವಿನ ನಂತರ ಗಂಡು ಮಗುವಿನ ನಿರೀಕ್ಷೆಯಲ್ಲಿದ್ದ ಗಂಡ, ಎರಡನೆಯದ್ದೂ ಹೆಣ್ಣು ಎಂದು ಗೊತ್ತಾದಾಗ ಹೆಂಡತಿಗೆ ದೈಹಿಕ ಮಾನಸಿಕ ಕಿರುಕುಳ ನೀಡಲಾರಂಭಿಸಿದ್ದ. ನಂತರ ಮಗುವನ್ನು ಅನಾಥಾಶ್ರಮಕ್ಕೆ ಬಿಟ್ಟು ಬರಲು ಹೆಂಡತಿಯನ್ನು ಪೀಡಿಸತೊಡಗಿದ್ದ. ಸಹಿಸಲಾರದಷ್ಟು ಹಿಂಸೆ ಶುರುವಾದಾಗ ಪೂಜಾ ಚೋಪ್ರಾಳ ತಾಯಿ ಎರಡು ಹೆಣ್ಣುಮಕ್ಕಳೊಂದಿಗೆ ಕೋಲ್ಕತ್ತ ಬಿಟ್ಟು ಪುಣೆಗೆ ಬಂದು ನೆಲೆಸಿದರು.

ಮಕ್ಕಳಿಗೆ ಉತ್ತಮ ಬದುಕು ಕಟ್ಟಿಕೊಡುವ ಪಣ ತೊಟ್ಟಿದ್ದ ತಾಯಿ, ಅವರನ್ನು ಒಳ್ಳೆಯ ಶಾಲೆ–ಕಾಲೇಜಿಗೆ ಸೇರಿಸಿದರು. ತಾಯಿಯ ಕಷ್ಟವನ್ನು ಅರಿತಿದ್ದ ಹೆಣ್ಣುಮಕ್ಕಳು ಕಷ್ಟಪಟ್ಟು ಓದಿದರು. ಪೂಜಾ ಚೋಪ್ರಾಳ ಅಕ್ಕ ಮನೆಮನೆಗೆ ದಿನಪತ್ರಿಕೆ ಹಾಕಿ ತಂಗಿಯನ್ನು ಮನೆಪಾಠಕ್ಕೆ ಸೇರಿಸಿದ್ದಳು. ಓದುವುದರಲ್ಲಿ ಜಾಣೆಯರಾಗಿದ್ದ ಹುಡುಗಿಯರಿಗೆ, ತಾಯಿ ಆಫೀಸ್‌ನಲ್ಲಿ ಕೊಟ್ಟಿದ್ದ ತಿಂಡಿಯನ್ನು ಪೇಪರ್‌ನಲ್ಲಿ ಕಟ್ಟಿಕೊಂಡು ಬಂದು ತಿನ್ನಿಸುತ್ತಿದ್ದಳು.

ಪೂಜಾ ಚೋಪ್ರಾ ಪಿಯುಸಿಯಲ್ಲಿ ಇರುವಾಗ ಮಾಡೆಲ್ ಆಗಬೇಕು ಎಂಬ ಕನಸು ಕಂಡಿದ್ದಲ್ಲದೆ ಅದನ್ನೇ ಉಸಿರಾಡಲು ಪ್ರಾರಂಭಿಸಿದಳು. ಮೊದಲು ಶಿಕ್ಷಣವನ್ನು ಮುಗಿಸಬೇಕು ಎಂದು ತಾಯಿ ಹೇಳಿದ್ದರಿಂದ – ಪುಣೆಯಲ್ಲಿ ಪದವಿ ಮುಗಿಸಿ, ಮಾಡೆಲ್ ಆಗುವ ಕನಸಿನಿಂದ ಮುಂಬೈಗೆ ಹೋದಳು. ಮಾಡೆಲ್ ಆಗಲು ಬೇಕಾಗುವಷ್ಟು ಹಣ ಆಕೆಯ ಬಳಿ ಇರಲಿಲ್ಲ. ಆದರೆ ಆಕೆಯ ಆಸಕ್ತಿ ಮತ್ತು ಪ್ರಯತ್ನವನ್ನು ಕಂಡು ಪರಿಚಯದ ಅನೇಕರು ಸಹಾಯ ಮಾಡಿದರು. ಮುಂಬೈಗೆ ಬಂದ ನಂತರ ಅನೇಕ ಸಂದರ್ಭದಲ್ಲಿ ದೇವಸ್ಥಾನದ ಪ್ರಸಾದವನ್ನೇ ನೆಚ್ಚಿಕೊಂಡಿದ್ದ ಹುಡುಗಿ ಇಂದು ಅನೇಕರ ಕನಸುಗಳಿಗೆ ರೆಕ್ಕೆ ಕಟ್ಟುತ್ತಿದ್ದಾಳೆ.

ತನ್ನನ್ನು ಹೆತ್ತ ಕಾರಣಕ್ಕೆ ತಾಯಿ ಇಷ್ಟೊಂದು ಕಷ್ಟ ಅನುಭವಿಸುವಂತಾಯಿತು. ಆಕೆಯ ಕಷ್ಟ ಕಳೆಯುವ ಸಾಧನೆ ಮಾಡಬೇಕೆಂಬ ಛಲದಿಂದ 'ಮಿಸ್ ಇಂಡಿಯಾ' ಆಗಲು ಪೂಜಾ ಹಗಲು ರಾತ್ರಿಯೆನ್ನದೆ ದೇಹ ಮತ್ತು ಬುದ್ಧಿಯನ್ನು ಹುರಿಗೊಳಿಸಿಕೊಂಡಿದ್ದಳು. ಮಿಸ್ ಇಂಡಿಯಾ ಸ್ಟೇಜ್‌ನಲ್ಲಿ ಕೇಳುವ ಪ್ರಶ್ನೆಗಳಿಗೆ ಉತ್ತರಿಸಲು ಬಹಳ ಓದುತ್ತಿದ್ದಳು. ಅಷ್ಟೇ ಆಲೋಚಿಸುತ್ತಿದ್ದಳು. ಯಾವ ನೆಲದಲ್ಲಿ ತಿರಸ್ಕೃತಳಾಗಿದ್ದಳೋ ಅದೇ ಕೋಲ್ಕತ್ತದ ನೆಲದಲ್ಲಿ, 17 ಫೆಬ್ರವರಿ 2009ರಂದು ಪೂಜಾ ಚೋಪ್ರಾ 'ಫೆಮಿನಾ ಮಿಸ್ ಇಂಡಿಯಾ ಈಸ್ಟ್' ಕಿರೀಟ ತೊಡಿಸಿಕೊಂಡರು. ಅಲ್ಲಿಂದ ನೇರವಾಗಿ 'ಮಿಸ್ ಇಂಡಿಯಾ'ಗೆ ಲಗ್ಗೆಯಿಟ್ಟು ಅದೇ ವರ್ಷ ಮಿಸ್ ಇಂಡಿಯಾ ಕಿರೀಟವನ್ನೂ ಮುಡಿಗೇರಿಸಿಕೊಂಡರು.

'ಮಿಸ್ ವರ್ಲ್ಡ್' ಆಗುವ ಹೊಸ ಕನಸು ಪೂಜಾ ಚೋಪ್ರಾಗೆ ಹುಟ್ಟಿಕೊಂಡಿತು. 12 ಡಿಸೆಂಬರ್ 2009ರಂದು ನಡೆಯಲಿದ್ದ ಮಿಸ್ ವರ್ಲ್ಡ್ ಅಂತಿಮ ಸ್ಪರ್ಧೆಗೆ ಒಂದು ವಾರ ಇರುವಾಗ ಮೆಟ್ಟಿಲುಗಳ ಮೇಲೆ ನಡೆಯುವಾಗ ಕಾಲು ಉಳುಕಿಸಿಕೊಂಡರು. ವೈದ್ಯರು ಸಂಪೂರ್ಣ ವಿಶ್ರಾಂತಿ ಪಡೆಯಲು ಹೇಳಿದರೂ ಅವರು ಸ್ಪರ್ಧೆಯಲ್ಲಿ ಭಾಗವಹಿಸಿದರು. 120 ಸ್ಪರ್ಧಿಗಳಲ್ಲಿ ಅಂತಿಮ ಸುತ್ತಿಗೆ ಆಯ್ಕೆಯಾದ 16 ಸುಂದರಿಯರಲ್ಲಿ ಒಬ್ಬರಾಗಿದ್ದರು. 'ಬ್ಯೂಟಿ ವಿತ್ ಎ ಪರ್ಪಸ್' ಪ್ರಶಸ್ತಿಯನ್ನು ಗೆದ್ದರು. ಅವರು ತಮಗೆ ಪ್ರಶಸ್ತಿಯಾಗಿ ಬಂದಿದ್ದ 10,000 ಅಮೆರಿಕನ್ ಡಾಲ್‌ಗಳನ್ನು ಹೆಣ್ಣುಮಕ್ಕಳ ಕಲ್ಯಾಣಕಾರ್ಯಗಳಿಗಾಗಿ ದಾನ ಮಾಡಿದರು.

ಬಾಲಿವುಡ್, ಟಾಲಿವುಡ್ ಸಿನಿಮಾಗಳಲ್ಲಿ ನಟಿಸಿರುವ ಪೂಜಾ ಚೋಪ್ರಾ ವೆಬ್ ಸೀರೀಸ್‌ಗಳಲ್ಲಿಯೂ ಕಾಣಿಸಿಕೊಂಡಿದ್ದಾರೆ. ಅನೇಕ ಬ್ರಾಂಡ್‌ಗಳನ್ನು ಪ್ರೊಮೋಟ್ ಮಾಡಿದ್ದಾರೆ. ಎರಡನೇ ಹೆಣ್ಣುಮಗು ಎಂಬ ಕಾರಣಕ್ಕೆ ತಂದೆಯಿಂದ ತಿರಸ್ಕೃತವಾಗಿ ತಾಯಿ ಮತ್ತು ಅಕ್ಕನ ಪರಿಶ್ರಮದಿಂದ ಬೆಳೆದ ಪೂಜಾ ಚೋಪ್ರಾ – 'Write your own destiny' – ತಿರಸ್ಕೃತಳಾಗಿದ್ದ ಹೆಣ್ಣು ಮಗುವುದೊಂದರ ಪ್ರಯಾಣ' ಎಂಬ ವಿಷಯದ ಮೇಲೆ ಬೆಂಗಳೂರಿನ ಕೃಪಾನಿಧಿ ಎಂಜಿನಿಯರಿಂಗ್ ಕಾಲೇಜಿನಲ್ಲಿ TEDಗಾಗಿ ಆಡಿದ ಮಾತುಗಳು ಎಲ್ಲರಿಗೂ ಸ್ಫೂರ್ತಿಯನ್ನು ಒದಗಿಸುವ ಹಾಗಿವೆ.

**ನಿಮ್ಮ ಗಂಡ ಮನೆಯಲ್ಲಿ ಜವಾಬ್ದಾರಿಗಳನ್ನು ಹಂಚಿಕೊಳ್ಳುವುದಾದರೆ, ನೀವು ಎರಡನೇ ಮಗುವಿನ ಬಗ್ಗೆ ಆಲೋಚಿಸಬಹುದು. ಈ ಬಗ್ಗೆ ನೀವೇ ಅಂತಿಮವಾಗಿ ನಿರ್ಧಾರ ತೆಗೆದುಕೊಳ್ಳಬೇಕು. ನಿಮ್ಮ ಎರಡನೇ ಮಗುವಿನ ಬಯಕೆ ನಿಮ್ಮ ಜೀವನವನ್ನು ಕಷ್ಟಕ್ಕೆ ತಳ್ಳುವ ಆಯ್ಕೆ ಮಾತ್ರ ಆಗಬಾರದು ಎಂಬ ಎಚ್ಚರಿಕೆ ಇರಲಿ.**

ಅನುಭವಜನ್ಯ ಮಾತುಗಳು, ತಾಯ್ತನದ ಸುತ್ತ ಹಬ್ಬಿಕೊಂಡಿರುವ ರಮ್ಯ ಕಲ್ಪನೆಗಳನ್ನು ಕಳಚಿ, ಬದುಕಿನ ಕಟು ವಾಸ್ತವಗಳನ್ನು ಗಮನಿಸಲು ಒತ್ತಾಯಿಸುತ್ತದೆ.

ಶಿಕ್ಷಕಿ, ಕವಯಿತ್ರಿ ಶ್ರೀದೇವಿ ಕೆರೆಮನೆ ಅವರ ಅಭಿಪ್ರಾಯ ವಿನ್ನಿಟಾರ ಅನುಭವಕ್ಕೆ ಪೂರ್ತಿ ಭಿನ್ನವಾದದ್ದು. 'ಎರಡು ಮಕ್ಕಳು ಬೇಕು' ಎಂದು ಅವರು ಮೊದಲೇ ನಿರ್ಧರಿಸಿಕೊಂಡುಬಿಟ್ಟಿದ್ದರಂತೆ.

'ನಮ್ಮ ಅಜ್ಜಿಗೆ ಮಾವ ಹಾಗೂ ಅಮ್ಮ ಇಬ್ಬರು ಮಕ್ಕಳು. ಅಜ್ಜಿಯ ಅಮ್ಮನಿಗೂ ಅಜ್ಜಿ ಹಾಗೂ ಅವರಣ್ಣ ಇಬ್ಬರೇ ಮಕ್ಕಳು. ಅಮ್ಮನಿಗೂ ಅಣ್ಣ ಮತ್ತು ನಾನು. ಹೀಗಾಗಿ ನನಗೂ ಮೊದಲ ಮಗು ಗಂಡಾಗುತ್ತದೆ, ಎರಡನೆಯದ್ದು ಹೆಣ್ಣಾಗುತ್ತದೆ ಎಂದು ಚಿಕ್ಕವಳಾಗಿದ್ದಾಗಲೇ ಅನಿಸಿಬಿಟ್ಟಿತ್ತು. ಹೀಗಾಗಿ ಎರಡನೆಯದ್ದು ಮಗಳೇ ಅಂತ ಅಂದುಕೊಂಡುಬಿಟ್ಟಿದ್ದೆ. ಗಂಡು ಮಗುವಾದ ಮೊದಲು ಹತ್ತು ಹದಿನೈದು ದಿನ ಬೇಸರ, ಮುನಿಸು ಎಲ್ಲ ಇತ್ತು. ನಂತರ ಅದು ಕರಗಿಹೋಯ್ತು. ಆದರೆ ಎರಡನೆಯ ಮಗು ಬೇಕು ಎಂದು ಪ್ಲ್ಯಾನ್ ಮಾಡಿ ಮಾಡಿದ್ದಲ್ಲ. ಸಹಜ ಅನ್ನುವ ಹಾಗೆ ಆಗಿದ್ದು' ಎನ್ನುತ್ತಾರೆ ಶ್ರೀದೇವಿ.

ಒಂದಂತೂ ನಿಜ. ಎಷ್ಟು ಮಕ್ಕಳಿರಬೇಕು? ಯಾವಾಗ ಮಕ್ಕಳನ್ನು ಮಾಡಿಕೊಳ್ಳಬೇಕು? ಎಂಬುದು ಅವರವರ ವೈಯಕ್ತಿಕ ನಿರ್ಧಾರ. ಆದರೆ ಈ ಕುರಿತು ನಿರ್ಧಾರ ತೆಗೆದುಕೊಳ್ಳಬೇಕಾದಾಗ ಗೊಂದಲ ಕಾಡುವುದು ಸರ್ವೇ ಸಾಮಾನ್ಯ. ಒಂದೊಂದು ದಿಕ್ಕಿನಿಂದ ಒಂದೊಂದು ರೀತಿಯ ನಿರ್ಧಾರಗಳು ಸರಿ ಅನಿಸುತ್ತಿರುತ್ತವೆ. ಮತ್ತೊಂದು ದಿಕ್ಕಿನಲ್ಲಿ ನಿಂತು ನೋಡಿದರೆ ಅದೇ ತಪ್ಪೇನೋ ಅಂತ ಅನುಮಾನ ಶುರುವಾಗುತ್ತದೆ. ಹಾಗಾದರೆ ನಿರ್ಧಾರ ತೆಗೆದುಕೊಳ್ಳುವುದು ಹೇಗೆ? ಅದಕ್ಕೆ ಸಹಾಯವಾಗಬಹುದಾದ ಕೆಲವು ಸಲಹೆಗಳನ್ನು ಕೊಡಬಹುದು.

## ಇನ್ನೊಂದು ಮಗು ಬೇಕೆ?

ನೀವಿಬ್ಬರೂ ಇನ್ನೊಂದು ಮಗುವಿಗಾಗಿ